## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 289 (326)
2. ಮಾನ್ಯ ಸದಸ್ಯರ ಹೆಸರು – ಶ್ರೀ ಬಸವನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ – 10/03/2025
4. ಉತ್ತರಿಸುವ ಸಚಿವರು – ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಿನಾಂಕ:10.07.2024 ರಿಂದ 18.07.2024 ರಂದು ಶಿಕ್ಷಣಾಧಿಕಾರಿಗಳು/ತತ್ಸಮಾನ ಹುದ್ದೆಗಳಿಗೆ ನಿಯಮ–32ರ ಅಡಿಯಲ್ಲಿ ಬಡ್ತಿ ನೀಡಲು ಇಡೀ ರಾಜ್ಯದಲ್ಲಿ ಒಟ್ಟು ಎಷ್ಟು ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿತ್ತು; ಇದರಲ್ಲಿ ಇತರೆ ವೃಂದದ ಹಾಗೂ ಕಲ್ಯಾಣ ಕರ್ನಾಟಕ ವೃಂದದ ಅಧಿಕಾರಿಗಳ ಸಂಖ್ಯೆ ಎಷ್ಟು;</td><td>ಗ್ರೂಪ್–ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ನೇರ ನೇಮಕಾತಿಗೆ ಮೀಸಲಾದ ಹುದ್ದೆಗಳಿಗೆ ಎದುರಾಗಿ ಗ್ರೂಪ್–ಬಿ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ–32ರಡಿ ಸ್ವತಂತ್ರ ಪ್ರಭಾರದಲ್ಲಿರಿಸುವ ಸಂಬಂಧ ದಿನಾಂಕ: 10.07.2024 ಮತ್ತು 18.07.2024 ರಂದು ಉಳಿದ ಮೂಲ ವೃಂದದ 108 ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 27 ಅಧಿಕಾರಿಗಳ ಪ್ರಸ್ತಾವನೆ ಸಲ್ಲಿಸಲು ಬೆಂಗಳೂರು ಆಯುಕ್ತಾಲಯದಿಂದ ತಿಳಿಸಲಾಗಿರುತ್ತದೆ.</td></tr>
<tr><td>ಆ)</td><td>ದಿನಾಂಕ:31.12.2024 ರವರೆಗೆ ಖಾಲಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಅದರಲ್ಲಿ ಇತರೆ ವೃಂದದ ಹಾಗೂ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳ ಸಂಖ್ಯೆ ಎಷ್ಟು;</td><td>ದಿನಾಂಕ: 31.12.2024ರ ಅಂತ್ಯಕ್ಕೆ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ನೇರ ನೇಮಕಾತಿಗೆ ಮೀಸಲಾದ ಉಳಿದ ಮೂಲ ವೃಂದದ 107 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 15 ಹುದ್ದೆಗಳು ಖಾಲಿ ಇರುತ್ತವೆ.</td></tr>
<tr><td>ಇ)</td><td>ದಿನಾಂಕ:05.10.2024 ಹಾಗೂ 30.01.2025 ಗಳಂದು ನಡೆದ ಡಿ.ಪಿ.ಸಿ. ಸಭೆಗಳಲ್ಲಿ ನಿಯಮ–32ರ ಅಡಿಯಲ್ಲಿ ಬಡ್ತಿ ನೀಡಲು ತೀರ್ಮಾನಿಸಿದ ಅಧಿಕಾರಿಗಳ ಸಂಖ್ಯೆ ಎಷ್ಟು; ಅದರಲ್ಲಿ ಇತರೆ ಹಾಗೂ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳ ಸಂಖ್ಯೆ ಎಷ್ಟು?</td><td>ಗ್ರೂಪ್–ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ–32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲು ದಿನಾಂಕ: 05.10.2024 ಮತ್ತು 30.01.2025 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಗಳಲ್ಲಿ ಪರಿಗಣಿಸಿರುವ ಹುದ್ದೆಗಳ ವಿವರ ಕೆಳಕಂಡಂತಿದೆ:–
<table>
<tr><th>ಕ್ರ. ಸಂ.</th><th>ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡೆದ ದಿನಾಂಕ</th><th>ಉಳಿದ ಮೂಲ ವೃಂದ</th><th>ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ</th><th>ಒಟ್ಟು</th></tr>
<tr><td>1</td><td>05.10.2024</td><td>78*</td><td>02</td><td>80</td></tr>
<tr><td>2</td><td>30.01.2025</td><td>11**</td><td>–</td><td>11</td></tr>
<tr><td></td><td>ಒಟ್ಟು</td><td>89</td><td>02</td><td>91</td></tr>
</table>
• 02 ಅಧಿಕಾರಿಗಳ ಪ್ರಕರಣಗಳನ್ನು ಮುಚ್ಚಿದ ಲಕೋಟೆಯಲ್ಲಿರಿಸಲಾಗಿದೆ.</td></tr>
</table>

| | | |
|---|---|---|
| | | ** ದಿನಾಂಕ: 05.10.2024ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಲು ಪರಿಗಣಿಸಲಾಗಿದ್ದ 80 ಅಧಿಕಾರಿಗಳ ಪೈಕಿ ಉಳಿದ ಮೂಲ ವೃಂದದ 07 ಅಧಿಕಾರಿಗಳು ಮುಖ್ಯ ಶಿಕ್ಷಕರ ವೃಂದದಲ್ಲಿಯೇ ಮುಂದುವರೆಯಲು ಇಚ್ಛಿಸಿರುವುದರಿಂದ ಸದರಿ ಹುದ್ದೆಗಳ ಜೊತೆಗೆ ಜೂನ್ 2024ರವರೆಗೆ ಲಭ್ಯವಾಗುವ ಹುದ್ದೆಗಳನ್ನು ಪರಿಗಣಿಸಲಾಗಿದೆ. |
| ಈ) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿಯಿರುವ ಒಟ್ಟು ಹುದ್ದೆಗಳೆಷ್ಟು; ಅವುಗಳಲ್ಲಿ ಇತರೆ ವೃಂದದ ಹಾಗೂ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳ ಸಂಖ್ಯೆ ಎಷ್ಟು; | ಪ್ರಸ್ತುತ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ನೇರ ನೇಮಕಾತಿಗೆ ಮೀಸಲಾದ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದ 13 ಹುದ್ದೆಗಳು ಖಾಲಿ ಇರುತ್ತವೆ. |
| ಉ) | ಕಲ್ಯಾಣ ಕರ್ನಾಟಕ ಭಾಗದ ಅಧಿಕಾರಿಗಳಿಗೆ ಬಡ್ತಿಗಾಗಿ ಮೀಸಲಿರಿಸಿದ ಹುದ್ದೆಗಳು ಖಾಲಿಯಿದ್ದರೂ ದಿನಾಂಕ:05.10.2024 ಹಾಗೂ 30.01.2025 ಗಳಂದು ನಡೆದ ಬಡ್ತಿಯ ಡಿ.ಪಿ.ಸಿ ಸಭೆಗಳಲ್ಲಿ ಇತರೆ ವೃಂದ (ಆರ್.ಪಿ.ಸಿ.)-80 ಅಧಿಕಾರಿಗಳಿಗೆ ಹಾಗೂ ಕಲ್ಯಾಣ ಕರ್ನಾಟಕ (ಕೆಕೆ)ದ ಕೇವಲ 02 ಅಧಿಕಾರಿಗಳಿಗೆ ಬಡ್ತಿ ನೀಡಲು ಕ್ರಮ ಕೈಗೊಂಡು, ಕಲ್ಯಾಣ ಕರ್ನಾಟಕ ಭಾಗಕ್ಕೆ ಹಾಗೂ ಅಧಿಕಾರಿಗಳಿಗೆ ಅನ್ಯಾಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶಾಲಾ ಶಿಕ್ಷಣ ಇಲಾಖೆಯ ಗ್ರೂಪ್-ಬಿ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳನ್ನು ಗ್ರೂಪ್-ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ-32ರಡಿ ಸ್ವತಂತ್ರ ಪ್ರಭಾರದಲ್ಲಿರಿಸುವ ಸಂಬಂಧ ದಿನಾಂಕ:05/10/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಡಯಟ್ ಮತ್ತು ಬಿಇಒ ಗಳಲ್ಲಿ ಕಡಿಮೆ ಕಾರ್ಯಭಾರವಿರುವುದರಿಂದ ಉಳಿದ ಮೂಲ ವೃಂದದ 30 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 13 ಹಿರಿಯ ಉಪನ್ಯಾಸಕರು / ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡದೇ ಇರಲು ಇಲಾಖಾ ಮುಂಬಡ್ತಿ ಸಮಿತಿಯು ತೀರ್ಮಾನಿಸಿರುತ್ತದೆ. |
| ಊ) | ಬಂದಿದ್ದರೆ, ಅನ್ಯಾಯ ಸರಿಪಡಿಸಲು ಕೈಗೊಂಡಿರುವ ಕ್ರಮಗಳಾವುವು? | ಇಲಾಖಾ ಮುಂಬಡ್ತಿ ಸಭೆಯ ತೀರ್ಮಾನದಂತೆ ಸದರಿ ಹುದ್ದೆಗಳನ್ನು ಹೊರತುಪಡಿಸಿ ಒಟ್ಟು 71 ಅಧಿಕಾರಿಗಳನ್ನು (ಉಳಿದ ಮೂಲ ವೃಂದದ 69 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 02) ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ-32ರಡಿ ಗ್ರೂಪ್-ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ / ತತ್ಸಮಾನ ವೃಂದದಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 245 ಡಿಪಿಐ 2024, ದಿನಾಂಕ:29/01/2025ರಲ್ಲಿ ಆದೇಶಿಸಲಾಗಿರುತ್ತದೆ (ಉಳಿದ ಮೂಲ ವೃಂದದ 07 ಅಧಿಕಾರಿಗಳು ಮುಖ್ಯ ಶಿಕ್ಷಕರ ವೃಂದದಲ್ಲಿಯೇ ಮುಂದುವರೆಯಲು ಇಚ್ಛಿಸಿ ಮನವಿ ಸಲ್ಲಿಸಿರುವುದರಿಂದ). |

ಸಂಖ್ಯೆ: ಇಪಿ 9 ಪಿಡಿಬಿ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು



File No. EP/9/PDB/2025-CMT-EP-Sec (Computer No. 1702897)
Generated from eOffice by HEMALATHA M S, EP-COMM-SA(HMS), SENIOR ASSISTANT, EDUCATION PRIMARY & SECONDARY SEC on 05/06/2025 ...